

ಕಾಮನಬಿಲ್ಲಿನ ಬಣ್ಣಗಳು ಮಾಸಿವೆಯೆ? ಕನ್ನಡದ ಮಕ್ಕಳ ಕಥಾಲೋಕವನ್ನು ಗಮನಿಸಿದಾಗ ಎದುರಾಗುವ ಪ್ರಶ್ನೆಯಿದು. ಕಥೆಗಳ ಕಾಮನಬಿಲ್ಲಿನ ಮಾತಿರಲಿ, ನಮ್ಮ ಮನಸ್ಸಿನ ಬಣ್ಣಗಳೂ ಮಾಸಿರುವ ಸನ್ನಿವೇಶ ಇಂದಿನದು. ಕಥೆ ಹೇಳುವುದು ಮತ್ತು ಕೇಳುವುದಕ್ಕೆ 'ಕಾಲಕ್ಷೇಪ'ದ ಅರ್ಥ ಕಳೆದುಹೋಗಿ, ಕಥೆಯನ್ನು ಮಕ್ಕಳ ಮನಸ್ಸನ್ನು ಮುದಗೊಳಿಸುವ ಹಾಗೂ ಹದಗೊಳಿಸುವ ಸಲಕರಣೆಯಾಗಿ ಬಳಸುವ ಕಲೆ ನಮ್ಮ ಹಿರಿಯರಿಗೆ ಕರಗತವಾಗಿತ್ತು. ಆದರೆ, ಕಥೆಗಳಿಗಿರುವ ಸಾಮಾಜಿಕ ಬದಲಾವಣೆಯ ಶಕ್ತಿಯನ್ನು ಈ ತಲೆಮಾರು ಮರೆತಿರುವಂತಿದೆ ಇಲ್ಲವೇ ನಿರ್ಲಕ್ಷಿಸಿದೆ. ಲಿಂಗ ಸಮಾನತೆ ಸಾಕಾರಗೊಂಡಿರುವ ಹಾಗೂ ಸಾಮಾಜಿಕ ತರತಮಗಳಿಂದ ಮುಕ್ತಗೊಂಡ ಆರೋಗ್ಯಕರ ಸಮಾಜದ ಕನಸು ಕಾಣುವವರಿಗೆ 'ಮಕ್ಕಳ ಕಥೆ' ಎನ್ನುವುದು ಕಲ್ಪವೃಕ್ಷವೇ ಸರಿ. ಮಕ್ಕಳ ಕಥೆಗಳ ಬಗ್ಗೆ ಯೋಚಿಸಲು, ಹೊಸತಾಗಿ ಕಥೆಗಳನ್ನು ಕಟ್ಟಲು, ಇರುವ ಕಥೆಗಳನ್ನು ಕಾಲಕ್ಕೆ ತಕ್ಕಂತೆ ಪರಿಷ್ಕರಿಸಲು ಇದು ಸಕಾಲ. ನವೆಂಬರ್ 14 'ಮಕ್ಕಳ ದಿನ'. ಮಕ್ಕಳನ್ನು ಪ್ರೀತಿಸಲು, ಮಗುತನವನ್ನು ಆವಾಹಿಸಿಕೊಳ್ಳಲು ಇದು ಸುಸಂದರ್ಭ.

**■ ಕೋಡಿಬೆಟ್ಟು ರಾಜಲಕ್ಷ್ಮಿ**